

women', 'for women' ಘೋಷಣೆಯ 'Ms & Mrs, ಲಾಂಜ್ ಅಂಡ್ ಕ್ಲಬ್' ಬೆಂಗಳೂರಿನ ಬನ್ನೇರುಘಟ್ಟದ ಮುಖ್ಯರಸ್ತೆಯಲ್ಲಿದೆ. ಈ ಬಗೆಯ ಲಾಂಜ್ ಅಂಡ್ ಕ್ಲಬ್ ದೇಶದಲ್ಲಿದು ಮೊದಲನೆಯದು ಎನ್ನಲಾಗಿದೆ. ಇಲ್ಲಿರುವ ಬಾರ್‌ಟೆಂಡರ್ ಮತ್ತು ಡಿಜೆಗಳು ಮಹಿಳೆಯರೇ ಆಗಿರುತ್ತಾರೆ. 'Walk in strangers, walk out friends' ಎಂಬುದು ಇವರ ಟ್ಯಾಗ್ ಲೈನ್. ಇಂಥ ಕಮ್ಯುನಿಟಿಗಳು 'ವಿಮೆನ್ಸ್ ಓನ್ಲಿ' ಎಂಬ ಫಲಕವನ್ನು ಎತ್ತಿ ಹಿಡಿದಿರುತ್ತವೆ.

ಇಂದು ನಾವು ಸಾಮಾಜಿಕ ಜಾಲತಾಣದೊಳಗೆ ಇಣುಕಿದ ಕೂಡಲೇ ಒಂದರ ಹಿಂದೊಂದು ಇಂಥ ಹತ್ತಾರು ಸಮುದಾಯಗಳ ಕುರಿತು ಜಾಹೀರಾತುಗಳು ಪುಟಿಯುತ್ತಿರುವುದನ್ನು ನೋಡುತ್ತಿರುತ್ತೇವೆ. ಅವೆಲ್ಲವೂ ಹೆಣ್ಣುಮಕ್ಕಳಿಗಾಗಿಯೇ ಇರುವಂಥ ರಿಟ್ರೀಟ್‌ಗಳು. ಹೊಸತನಕ್ಕೆ ತೆರೆದುಕೊಳ್ಳುವ ಹೆಣ್ಣುಮಕ್ಕಳಿಗೆ ಸುರಕ್ಷತೆಯೇ ಮುಖ್ಯ ಆದ್ಯತೆಯಾಗಿರುವುದರಿಂದ ಈ ರಿಟ್ರೀಟ್‌ಗಳು ಒಂದು ವರದಾನ ಎಂದೇ ಹೇಳಬಹುದು. ಹೆಣ್ಣುಮಕ್ಕಳಿಗಾಗೇ ಪ್ರವಾಸಗಳು, ತಾಯಂದಿರಿಗಾಗಿ 'moms world'ನಲ್ಲಿ ಡಯಟ್, ನ್ಯೂಟ್ರಿಷನ್, ಹೆಣ್ಣುಮಕ್ಕಳ ಕೌಟುಂಬಿಕ ಸಂಬಂಧ ಮತ್ತು ಸವಾಲುಗಳು, ಅವರ ಜೀವನಶೈಲಿ – ಹೀಗೆ ಹಲವು ಬಗೆಯ ಕಮ್ಯುನಿಟಿ ಸಮೂಹಗಳು ಮಹಿಳೆಯರನ್ನು ಕೈಬೀಸಿ ಕರೆಯುತ್ತಿವೆ. ಇವುಗಳ ಹಿನ್ನೆಲೆಯಲ್ಲಿರುವುದು ಲಾಭದಾಯಕ ವ್ಯಾಪಾರ ಎನ್ನುವುದು ನಿಜವಾದರೂ, ಅವು ಏಕತಾನತೆಯಿಂದ ಬಳಲುವ ಮಹಿಳೆಯರಿಗೆ ಹೊಸ ಅನುಭವವನ್ನು ನೀಡುತ್ತಿರುವುದನ್ನು ಅಲ್ಲಗಳೆಯಲಾಗದು.

ಮಹಿಳೆಯರೇ ಕೈಗೊಳ್ಳುವ ಪ್ರವಾಸದಲ್ಲಿ ಕೂಡ ವೈವಿಧ್ಯವಿದೆ. ಹೈಕಿಂಗ್–ಟ್ರೆಕ್ಕಿಂಗ್, ತೀರ್ಥಯಾತ್ರೆ, ಸಮುದ್ರತೀರ, ಗುಡ್ಡ ಬೆಟ್ಟಗಳ ಸುತ್ತಾಟ, ಹೀಗೆ ತಿರುಗಾಟ ಹಲವು ರೂಪಗಳಲ್ಲಿರುತ್ತದೆ. ಕಿರು ಪ್ರವಾಸಗಳು ವಾರಾಂತ್ಯದಲ್ಲಿ ನಡೆಯುತ್ತವೆ. ನಮ್ಮ ರಾಜ್ಯ/ದೇಶದ ಬೇರೆ ಬೇರೆ ಭಾಗಗಳ ಪ್ರವಾಸಗಳು ವಾರ, ಎರಡು ವಾರಗಳಷ್ಟು ದೀರ್ಘವೂ ಆಗಿರಬಹುದು.

ರಿಟ್ರೀಟ್ ಉದ್ದೇಶದ ಯಾವುದೇ ಸಮುದಾಯಗಳು ವಯಸ್ಸಿನ ಮಿತಿ ವಿಧಿಸುವುದಿಲ್ಲ. ಯುವತಿಯರಿಂದ ವಯಸ್ಸಾದ ಹೆಂಗಸರೂ ಖುಷಿಯಿಂದ ಬೆರೆಯುತ್ತಾರೆ, ಬದುಕನ್ನು ಅನುಭವಿಸುತ್ತಾರೆ. ಆ ಕೆಲ ದಿನಗಳು ಒಂದು ಕುಟುಂಬವಾಗಿ ಮಾರ್ಪಾಡಾಗುತ್ತಾರೆ. ಅಪರಿಚಿತರೊಡನೆ ಕೆಲವು ದಿನಗಳ ಪರಿಚಯ ಮುಂದುವರೆದು, ಅವರ ಸಾಂಗತ್ಯದಿಂದ ಪರಸ್ಪರ ಗಳಸ್ಯ ಕಂಠಸ್ಯ ಸ್ನೇಹ ಉಂಟಾಗುವುದೂ ಇದೆ.

## ಹೆಣ್ಣುಮಕ್ಕಳಿಗಾಗಿಯೇ ರಿಟ್ರೀಟ್

'ವಿಮೆನ್ಸ್ ರಿಟ್ರೀಟ್' ಎಂಬ ಪದ–ಪರಿಕಲ್ಪನೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ಗಳಲ್ಲಿ ಬಹಳಷ್ಟು ಸದ್ದು ಮಾಡುತ್ತಿದೆ. ಈ ರಿಟ್ರೀಟ್‌ಗಳು 'ವಿಮೆನ್ ಓನ್ಲಿ' ಎಂಬ ವಿಶೇಷ ಹಣೆಪಟ್ಟಿ ಹೊತ್ತು ಹೆಂಗೆಳೆಯರನ್ನು ಮೊದಲ ಗುಕ್ಕಿಗೇ ಬರಸೆಳೆದುಕೊಳ್ಳುತ್ತಿವೆ. ಏನಿದು 'ವಿಮೆನ್ಸ್ ರಿಟ್ರೀಟ್' ಎನ್ನುವುದನ್ನು ಕೊಂಚ ವಿಷದವಾಗಿ ಗಮನಿಸೋಣ.

ಇಂದಿನ ಹೆಣ್ಣುಮಕ್ಕಳು ನೌಕರಿಯಲ್ಲಿರಲಿ ಅಥವಾ ಹೌಸ್ ವೈಫ್‌ಗಳಾಗಿರಲಿ, ತರುಣಿಯರಾಗಿರಲಿ ಅಥವಾ ವಯಸ್ಕರಾಗಿರಲಿ, ತಮ್ಮ ದಿನನಿತ್ಯದ ಜಂಜಾಟ ಹಾಗೂ ನಾಗಾಲೋಟದಿಂದ ಓಡುತ್ತಿರುವ ಜೀವನಶೈಲಿಯಿಂದ ತಾತ್ಕಾಲಿಕ ವಿರಾಮ ಪಡೆಯಲು ಬಯಸುವುದು ಸಹಜ. ಗೌಜು ಗದ್ದಲವಿಲ್ಲದ ಏಕಾಂತ ತಮ್ಮ ಬದುಕಿಗೆ ಹೊಸ ಉತ್ಸಾಹ ತಂದುಕೊಡಬಹುದೆನ್ನುವ ನಿರೀಕ್ಷೆ ಅವರದು. 'ತಮ್ಮದೇ ಸಮಯ'ಕ್ಕೆ (me time) ಮಹತ್ವ ಕೊಟ್ಟು ಹೊಸ ಚೈತನ್ಯದಿಂದ ತಮ್ಮ ಎಂದಿನ ಬದುಕನ್ನು ಮುಂದುವರಿಸುವ ಉಮೇದು ಅವರದು. ಇಂದಿನ ಯುವಜನತೆ ಆರೋಗ್ಯಕರ ಜೀವನಶೈಲಿಗೆ ಪ್ರಾಮುಖ್ಯತೆ ಕೊಡುತ್ತಿದ್ದು, ತಮ್ಮ ಬದುಕನ್ನು ಉತ್ತಮಗೊಳಿಸಿಕೊಳ್ಳಲು ಆಂತರಿಕ ಪಯಣದತ್ತ ಮುಖ ಮಾಡುತ್ತಿದ್ದಾರೆ. ಇದಕ್ಕೆ ತಳಹದಿಯಾಗಿ ಯೋಗ, ಧ್ಯಾನ, ಅಧ್ಯಾತ್ಮ, ಫಿಟ್‌ನೆಸ್, ಡೀಟಾಕ್ಸ್, ಅಡ್ವೆಂಚರ್, ಪ್ರಕೃತಿಯ ಒಡನಾಟ, ವೆಲ್‌ನೆಸ್, ಹೆಲ್ತ್ ಅಂಡ್ ಬ್ಯೂಟಿ, ಲಕ್ಷುರಿ, ಜಸ್ಟ್ ಫನ್ ರಿಟ್ರೀಟ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಅವರು ತಮ್ಮ ಬದುಕಿನಲ್ಲಿ ದೊಡ್ಡ ಬದಲಾವಣೆಯನ್ನೇ ಕಾಣುತ್ತಿದ್ದಾರೆ. ಕೆಲವರಿಗೆ ಇವು ಗಾಢ ಪ್ರಭಾವ ಬೀರಿ ಅವರ ಬದುಕಿನ ಮುಖ್ಯ ತಿರುವು ಆಗಿರಲೂ ಸಾಧ್ಯ.

ಇದೀಗ ದೊಡ್ಡ ಸಂಖ್ಯೆಯ ಹೆಣ್ಣುಮಕ್ಕಳು ಇಂಥ ಒಂದು ಪಯಣಕ್ಕೆ ಸಜ್ಜಾಗಿ ತಮ್ಮ ಕುಟುಂಬವನ್ನು ಹಿಂದಿಕ್ಕಿ ಒಬ್ಬಂಟಿಗರಾಗಿ ಹೊರಡುತ್ತಿದ್ದಾರೆ. ಇದನ್ನು ತಪ್ಪು ಎಂದು ಹೇಳಲಾಗದು. ಅವರಿಗೆ ತಮ್ಮ ಬದುಕಿನ ಬಗ್ಗೆ ಮನನ ಮಾಡಲು, ಅಂತರ್ಯದೊಳಗೆ ಇಣುಕಿನೋಡಲು, ಮನಸ್ಸಿಗೆ ಆಗಿರಬಹುದಾದ ಗಾಯ ಮಾಯಲು, ಪುಟಿದೇಳಲು ಅಲ್ಪವಿರಾಮದ ಅವಶ್ಯಕತೆ ಖಂಡಿತಾ ಇರುತ್ತದೆ. ಯಾವ ನಿರೀಕ್ಷೆ ಇಲ್ಲದೆ ಸುಮ್ಮನೆ ಒಂದು ಹೊಸ ಅನುಭವ ಪಡೆಯುವ ಉದ್ದೇಶವೂ ಅವರಿಗಿರಬಹುದು. ಈ ಸಾಧ್ಯತೆಯನ್ನೇ ಬಂಡವಾಳ ಮಾಡಿಕೊಂಡಿರುವ ಅನೇಕ ಸಮುದಾಯಗಳು ಇಂಥ ಹೆಣ್ಣುಮಕ್ಕಳನ್ನು ತಮ್ಮ ತೆಕ್ಕೆಗೆ ಹಾಕಿಕೊಳ್ಳುತ್ತಿವೆ. ಇದರಿಂದ ಈ ಸಮುದಾಯಗಳಿಗೆ ಹಣಕಾಸಿನ ವಿಚಾರದಲ್ಲಿ ಲಾಭದಾಯಕವಾದರೆ, ಇದರಲ್ಲಿ ಪಾಲ್ಗೊಳ್ಳುವವರ ಜೀವನಶೈಲಿಯಲ್ಲಿ ಹೊಸ ಬದಲಾವಣೆಯನ್ನು ಕಾಣಬಹುದು. ರಿಟ್ರೀಟ್‌ನಿಂದ ತಮ್ಮ ಬದುಕಿಗೆ ಬೇಕಾಗುವಂತಹ ಯಾವುದಾದರೂ ಒಂದು ಸಣ್ಣ ಇಂಧನವನ್ನಾದರೂ ಕೊಂಡೊಯ್ಯಬಹುದು. ಇದುವೇ 'ವಿಮೆನ್ಸ್ ರಿಟ್ರೀಟ್.'

## ಬದುಕಿಗೊಂದು ಸುಂದರ ತಿರುವು

ಮಹಿಳೆಯರ ರಿಟ್ರೀಟ್‌ಗಳು ಒಂದು ದಿನ ಅಥವಾ ಹಲವು ದಿನಗಳ ಕಾರ್ಯಾಗಾರವಾಗಿದ್ದು, ನಿಗದಿತ

**ಮನೆಯ ಚೌಕಟ್ಟಿನೊಳಗೆ ಹೆಣ್ಣುಮಕ್ಕಳ ಜೀವನ ಮುಗಿದುಹೋಗುತ್ತದೆ ಎನ್ನುವ ಕಾಲ ಇದಲ್ಲ. ಮನೆಯ ಹೊರಗಿನ ಗಾಳಿಬೆಳಕಿಗೂ ಮಹಿಳೆ ತನ್ನನ್ನೊಡ್ಡಿಕೊಳ್ಳುತ್ತಿರುವ ದಿನಗಳಿವು. ತನಗೂ ಒಂದು ಬದುಕಿದೆ, ಸ್ವಂತ ವ್ಯಕ್ತಿತ್ವವಿದೆ ಹಾಗೂ ಭಾವನೆಗಳಿವೆ ಎನ್ನುವ ಚಿಂತನೆ ಹೆಣ್ಣನ್ನು ಮಾನಸಿಕವಾಗಿ ದೃಢಗೊಳಿಸುತ್ತದೆ.**